

ಟರ್ಕಿಯ ಇಸ್ತಾಂಬುಲ್‌ನಲ್ಲಿ ಹೊಸ ವರ್ಷದ ಸಂಭ್ರಮಕ್ಕಾಗಿ ಧ್ವಜ ಅಲಂಕಾರ.

'ಹೊಸತು' ಎನ್ನುವುದು ಮನುಷ್ಯನ ಜೀವನಪ್ರೀತಿಯನ್ನು ಹೆಚ್ಚಿಸುವಂತಹ ದ್ರವ್ಯಗಳಲ್ಲೊಂದು. ಹೊಸತಿನ ಬೆನ್ನುಬಿದ್ದ ಕಾರಣದಿಂದಾಗಿಯೇ ಈ ಜಗತ್ತು ಅನೇಕ ಆವಿಷ್ಕಾರಗಳನ್ನು ಕಂಡಿದೆ, ನಾಗರಿಕತೆಯ ಚಕ್ರ ನಿರಂತರವಾಗಿ ತಿರುಗುತ್ತಿದೆ. ಬಹುಶಃ ಮನುಷ್ಯನ ಹೊಸತಿನ ಹಂಬಲ ಯಾವಾಗ ಕೊನೆಗೊಳ್ಳುವುದೋ ಅದು ಬದುಕಿನ ಕೊನೆಯೇ ಇರಬೇಕು. ವಿರಾಗಿಯ ಮೋಕ್ಷದ ಹಂಬಲ ಕೂಡ ಒಂದು ಬಗೆಯ ಹೊಸತಿನ ನಿರೀಕ್ಷೆಯೇ. ನಾಳೆ ಎನ್ನುವುದು ಕೂಡ ಹೊಸತೇ ಅಲ್ಲವೇ? ನಾಳೆಗಳ ಬಗ್ಗೆ ನಿರೀಕ್ಷೆ ಇಲ್ಲದೆ ಹೋದರೆ ಇಂದಿಗೆ ಅರ್ಥವಾದರೂ ಏನು? ಈ ಹಿನ್ನೆಲೆಯಲ್ಲಿ ದಿನದಿನವೂ ಯುಗಾದಿ!

ಯುಗಾದಿ ಹೊಸತನದೊಂದಿಗೆ ತಳಕು ಹಾಕಿಕೊಂಡಿರುವ ಹಬ್ಬ. ಆದರೆ, ಇದು ಮನುಷ್ಯನ ಜೀವನದಲ್ಲಿ ಕಾಣಿಸುವ ಹೊಸತಲ್ಲ, ಪ್ರಕೃತಿಯಲ್ಲಿ ಕಾಣಿಸುವ ಹೊಸತನ. ಇದನ್ನೇ ಕವಿ ದ.ರಾ. ಬೇಂದ್ರೆ, 'ವರುಷಕೊಂದು ಹೊಸತು ಜನ್ಮ, ಹರುಷಕೊಂದು ಹೊಸತು ನೆಲೆಯು' ಎಂದು ಉದ್ಗರಿಸಿರುವುದು. ಪ್ರಕೃತಿಯಲ್ಲಿನ ಹೊಸತನ್ನು ನೋಡಿ ಬೆರಗಾಗುತ್ತ, ತನ್ನೊಳಗೂ ಹೊಸತನ್ನು ಆವಾಹಿಸಿಕೊಳ್ಳುವ ಮನುಷ್ಯನ ಹಂಬಲ ಯುಗಾದಿಯ ರೂಪದಲ್ಲಿ ರೂಪುಗೊಂಡಿದೆ. ಅಷ್ಟು ಮಾತ್ರವಲ್ಲ, ಬೇವು–ಬೆಲ್ಲದ ಸಮೀಕರಣ ಜೀವನಕ್ಕೆ ಅಗತ್ಯ ಎನ್ನುವ ತಾತ್ವಿಕತೆಯೂ ಯುಗಾದಿಯಲ್ಲಿದೆ. ಬೇವು ರುಚಿಕರವಾದರೂ, ಆರೋಗ್ಯಕ್ಕೆ ಬೇವಿನ ಕಹಿಯೂ ಬೇಕು ಎನ್ನುವ ವಿವೇಕ ಹಬ್ಬದ ಹಿನ್ನೆಲೆಯಲ್ಲಿದೆ.

ಯುಗಾದಿಯೊಂದಿಗೆ ಹಿಂದೂ ಪಂಚಾಂಗ ಬದಲಾಗುತ್ತದೆ. ಪ್ರಕೃತಿಚಕ್ರವನ್ನೂ ಕಾಲಚಕ್ರವನ್ನೂ ಒಟ್ಟಿಗೆ ಕಾಣುವ ಪ್ರಯತ್ನ ಈ ಹಬ್ಬದ ಆಚರಣೆ. ವಿಶ್ವದ ಬಹುತೇಕ ದೇಶಗಳು ಜನವರಿ 1ನ್ನು ಹೊಸ ವರ್ಷದ ಸಂಭ್ರಮವಾಗಿ ಆಚರಿಸುತ್ತವೆ. ನಾವು ಭಾರತೀಯರು, ಜನವರಿ 1ನ್ನು ಕ್ಯಾಲೆಂಡರ್ ಪ್ರಕಾರ ಹೊಸ ವರ್ಷವೆಂದು ಸಂಭ್ರಮಿಸುತ್ತೇವೆ. ಬೇವು–ಬೆಲ್ಲ ತಿಂದು ಯುಗಾದಿಗೂ ಹೊಸ ಸ್ಪರ್ಶ ನೀಡುತ್ತೇವೆ. ಹೀಗಾಗಿ, ಭಾರತೀಯರ ಪಾಲಿಗೆ ಎರಡು ಹೊಸ ವರ್ಷ!

ಭಾರತದಲ್ಲಷ್ಟೇ ಅಲ್ಲ – ಇರಾನ್, ಟರ್ಕಿ, ಸಿರಿಯಾಗಳಲ್ಲೂ ವಸಂತನ ಆಗಮನವನ್ನು ಹೊಸ ವರ್ಷದ ಹಬ್ಬದ ರೀತಿಯಲ್ಲಿ, 'ನ್ಯೂರೋಜ್', 'ನವರಾಜ್' (**Newroz – Nawroz**) ಹೆಸರಿನಲ್ಲಿ ಆಚರಿಸಲಾಗುತ್ತದೆ. ಒಂದಾನೊಂದು ಕಾಲದಲ್ಲಿ, ಈ ಭಾಗಗಳಲ್ಲಿ ಅಗ್ನಿಯ ಆರಾಧನೆ ನಡೆಯುತ್ತಿತ್ತು. ದೃಷ್ಟಿ, ಒಳ್ಳೆಯತನ ಹಾಗೂ ಶುದ್ಧೀಕರಣದ ಸಂಕೇತವಾಗಿ ಬೆಂಕಿ ಅವರಿಗೆ ಮುಖ್ಯವೆನ್ನಿಸಿತ್ತು. ಈ ಸ್ಮೃತಿಗಳು ಈಗಲೂ ಅಲ್ಲಿನ ಜನರಲ್ಲಿ ಜೀವಂತವಾಗಿವೆ ಹಾಗೂ ವಸಂತನ ಸ್ವಾಗತದ ರೂಪದಲ್ಲಿ ಹೊರಹೊಮ್ಮುತ್ತವೆ.

ಮಾರ್ಚ್ ಕೊನೆಯಲ್ಲಿ ಅಥವಾ ಏಪ್ರಿಲ್ ಆರಂಭದಲ್ಲಿ ಯುಗಾದಿ ಹಬ್ಬ ಬರುತ್ತದೆ. ಈ ಸಂಧಿಕಾಲ ಹಣಕಾಸು ವರ್ಷಕ್ಕೂ ಅನ್ವಯಿಸುತ್ತದೆ. ಪ್ರತಿ ವರ್ಷ ಏಪ್ರಿಲ್ 1ರಿಂದ ಹಣಕಾಸು ಆರ್ಥಿಕ ವರ್ಷ ಆರಂಭವಾಗುತ್ತದೆ. ಆ ಕಾರಣದಿಂದಾಗಿ, ಈ ಸಂದರ್ಭ ಕಳೆದ ವರ್ಷದ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಹಾಗೂ ಬರ ಮಾಡಿಕೊಳ್ಳುತ್ತಿರುವ ವರ್ಷದ ಆರ್ಥಿಕ ನಕ್ಷೆಯನ್ನು ಸ್ಪಷ್ಟಪಡಿಸಿಕೊಳ್ಳುವ ಹೊತ್ತು. ಈ ಮೂಲಕ ಹಬ್ಬಕ್ಕೆ 'ಆರ್ಥಿಕ ಯುಗಾದಿ' ಎನ್ನುವ ಆಯಾಮವೂ ಇದೆ.

ಯುಗಾದಿಯಂದು ಹೊಸ ಬಟ್ಟೆ ಧರಿಸುವುದು ಕೂಡ ನಮ್ಮನ್ನು ನಾವು ಹೊಸತಾಗಿಸಿಕೊಳ್ಳುವ ಪ್ರಯತ್ನ. ಹಬ್ಬದ ಊಟದ ಜೊತೆಗೆ ಕೆಲವು ಪ್ರದೇಶಗಳಲ್ಲಿ ಜೂಜಿನ ಸಂಭ್ರಮವೂ ಸೇರಿಕೊಳ್ಳುತ್ತದೆ. ಇವೆಲ್ಲವೂ ಹೊಸ ವರ್ಷದಲ್ಲಿ ನಮ್ಮ ಬದುಕು ಸಾಗಬಹುದಾದ ದಿಕ್ಕಿನ ಬಗ್ಗೆ ನಮಗಿರುವ ಕುತೂಹಲದಂತೆ ಕಾಣಿಸುತ್ತದೆ. ಮನೆಯಲ್ಲಿನ ವಸ್ತುಗಳ ಕೊಳೆ ತೊಳೆಯುವ ಯುಗಾದಿಯ ಹಿಂದಿನ ದಿನದ 'ಮುಸುರೆ ಹಬ್ಬ', ಯುಗಾದಿ ನೆಪದಲ್ಲಿ ಮನೆಗೆ ಸುಣ್ಣಬಣ್ಣ ಮಾಡುವುದು – ಇವೆಲ್ಲ ನಮ್ಮೊಂದಿಗೆ ನಮ್ಮ ಪರಿಸರವನ್ನೂ ಹೊಸತಾಗಿಸುವ ಪ್ರಯತ್ನಗಳು.

ಯುಗಾದಿಯ ಮರುದಿನ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಮಾಂಸಾಹಾರ ಕೆಲವರಿಗೆ ಕಡ್ಡಾಯ. ಬೇಟೆಗೆ ಹೋಗುವ ಸಂಪ್ರದಾಯ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ರೂಢಿಯಲ್ಲಿದೆ. ಇವೆಲ್ಲ ಆಚರಣೆಗಳ ಮಾತಾಯಿತು. ಬಹಿರಂಗದ ಆಚರಣೆಗಳನ್ನು ಮೀರಿ ಅಂತರಂಗವನ್ನು ಹೊಸದಾಗಿಸಿಕೊಳ್ಳುವುದಕ್ಕೂ ಯುಗಾದಿ ನೆಪವಾಗಬೇಕು. ಜಗತ್ತು ಹೊಸತಾಗಬೇಕು ಎಂದು ಅಪೇಕ್ಷಿಸುವ ನಾವು, ಆ ಜಗತ್ತು ಹೆಚ್ಚು ಮಾನವೀಯವಾಗಬೇಕು ಎಂದು ಬಯಸುವುದು ಈ ಯುಗಾದಿಯನ್ನು ಅರ್ಥಪೂರ್ಣಗೊಳಿಸೀತು.